ಸಂಸ್ಕೃತದ ಮೂಷಿಕ ಹಾಗೂ ಮಶಕ ಇವೆರಡಕ್ಕೂ ಸಾಮ್ಯತೆಯಿದೆ... ಎರಡೂ ನಿದ್ರಾಭಂಗ ಮಾಡುವ ಉಪದ್ರವಿಗಳೇ ಆದರೂ, ಒಂದು ದ್ರವ ಹೀರದ ಉಪದ್ರವಿಯಾದರೆ ಇನ್ನೊಂದು ದ್ರವ ಹೀರುವ ಉಪದ್ರವಿ. ಇಂಥವನ್ನೆಲ್ಲ ದೇವರು ಯಾಕಾಗಿ ಸೃಷ್ಟಿಸುತ್ತಾನೋ?

ಕೇಳಿ ಹೌದೆನ್ನಿಸಿ ಅಳು ನಿಲ್ಲಿಸಿದೆ. ಕೆಲಸದ ಮಂಜು 'ಆಲ್ ಔಟೋ, ಗುಡ್ ನೈಟೋ ತಂದಿಡೋದಪ್ಪಾ... ಇಷ್ಟು ಸಣ್ಣ ಸೊಳ್ಳೆಗಳನ್ನೆಲ್ಲ ಯಾರಾದರೂ ಇಷ್ಟೊಂದು ದೊಡ್ಡದು ಮಾಡುತ್ತಾರೆಯೇ?' ಅಂದಳು ತನ್ನ ಅಧಿಕಾರವಾಣಿಯಿಂದ. ಆಲ್ ಔಟ್ ವಾಸನೆಗೆ ನಾವೇ ಮನೆಯಿಂದ ಔಟ್ ಆಗೋ ಹಾಗಾಗಿ, ಗುಡ್ ನೈಟಿನ ಬದಲಿಗೆ ಸೊಳ್ಳೆಗಳನ್ನು ಸಾಯಿಸೀ ಸಾಯಿಸೀ ಬ್ಲಡ್ ನೈಟ್ ಆಗಿ... ಅಂಗೈಗೆ ಮೆತ್ತಿದ ಈ ಬ್ಲಡ್ಡಿನ ಯಾ ಬ್ಲಂಡರಿನ ವಾಸನೆಯನ್ನು ತೊಲಗಿಸಲು ನಮ್ಮ ಓವರ್ ಹೆಡ್ಡಿನ ಟ್ಯಾಂಕಿಯ ನೀರೂ ಸಾಕಾಗದಾಗಿದೆ... ಎಂದು ಶೇಕ್ಸ್‌ಪಿಯರನ್ ಶೈಲಿಯಲ್ಲಿ ಹೇಳುವಲ್ಲಿಯವರೆಗೆ ಇವೆಲ್ಲ ಘಟಿಸಿಹೋದ ಭೂತಗಳಾಗಿ ಹೇಳಲು ಏನೂ ಉಳಿಯದಂತೆ ಮುಗಿದುಹೋಗಿತ್ತು.

ಒಳ ಬರುವ ಕರೆಗಳಲ್ಲೂ ಈ ಇನ್ ಕಮಿಂಗ್ ಅಭ್ಯಾಗತರ ಬಗ್ಗೆಯೇ ಮಾತು.

'ಏನದು ಶಬ್ದ?'

'ಅನಾಫಿಲೀಸಾ.'

'ಯಾರು ಗ್ರೀಕ್ ದೇವತೇನಾ?'

'ಅಲ್ಲ ಸಿಕ್ ದೇವತೆ.'

'ಕೊಂದೇ ಬಿಟ್ಯಾ?'

'ಇಲ್ಲ ತಪ್ಪಿಸಿಕೊಂಡಳು...'

ಎಲ್ಲ ಮುಗಿದರೂ ಇದೊಂದು ಕೊನೆಯ ಪ್ರಯತ್ನವೆಂಬಂತೆ ಪರದೆಯೊಂದು ಯಜಮಾನರ ಜೊತೆಗೆ ಮನೆಗೆ ಬಂತು. 'ಪರ್ದೆ ಮೇ ರೆಹನೇ ದೋ ಪರ್ದಾ ನ ಉಟಾವೋ... ಪರ್ದಾ ಜೋ ಉಟ್ ಗಯಾ ತೊ ಭೀ ಖುಲ್ ಜಾಯೇಗಾ...' ಎಂದು ಆಶಾಜಿ ಸ್ಟೈಲ್‌ನಲ್ಲಿ ಹಾಡುತ್ತಾ ಪರದೆಯೊಳಗೆ ಸೇರಿ ಇಂದಾದರೂ ನೆಮ್ಮದಿಯಿಂದ ನಿದ್ರಿಸಬೇಕೆಂದು ತಲೆಯೆತ್ತಿ ನೋಡುತ್ತೇನೆ, ಅಲ್ಲಿ ಅದಾಗಲೇ ಐವತ್ತಕ್ಕಿಂತಲೂ ಹೆಚ್ಚು ಸೊಳ್ಳೆಗಳು ದ್ರವ ಹೀರಲು ಸಾಲಾಗಿ ಕುಳಿತದ್ದು ಕಂಡುಬಂತು. ನನ್ನ ಹಾಡು, 'ಅಲ್ಲಾ ಮೇರಿ ತೋಬಾ... ಅ...ಲ್ಲಾ...ಮೇ...ರಿ...' ಆಶಾ ಸ್ಟೈಲ್ ಹೋಗಿ ನಿರಾಶಾ ಶೈಲಿಯಲ್ಲಿ ಕೊನೆಗೊಂಡು ಉಳಿದದ್ದು ಗಂಟಲಲ್ಲೇ ಇಂಗಿಹೋಯಿತು. ಓಝೋನ್ ಪರದೆಯೇ ಹರಿದು ಭೂಮಿ ಅಪಾಯದಲ್ಲಿದೆಯಂತೆ, ಇನ್ನು ಇದು ನಮಗೆ ರಕ್ಷಣೆ ಕೊಡುವುದೇ? ಪುನಃ ಚಪ್ಪಾಳೆಯ ಜೊತೆಗೆ ಪರದೆಯೊಳಗೆಯೇ ತಕ ತಕಿಟ ತಕ ತಕಿಟ ತಕ ತಕಿಟ ತಾ... ನವರಂಗ ನಾಟ್ಯ ಸೇವೆಯೂ ಸುರುವಾಗಿ ಹಾರಾಡುವ ಕಿನ್ನರಿಗಳನ್ನು ಚಚ್ಚಿ ಮುಗಿಸುವವರೆಗೂ ಮುಂದುವರಿಯಿತು. ಈ ನಡುವೆ ಆಶಾಜಿಯ ಹಾಡಿನಂತೆ ಸುಶೀಲಮ್ಮ ಹಾಡಿದ ಒಂದು ಹಾಡೂ ನೆನಪಾಗಿ, 'ರಾಗ ನಿಮ್ಮದು ತಾಳ ನನ್ನದು... ಗಾನ ನಿಮ್ಮದು ನಾಟ್ಯ ನನ್ನದು...' ಪರದೆಯೆಂಬ ರಂಗಸಜ್ಜೆಯೊಳಗೆಯೇ ಕುಳಿತು ಪರಮಾದರದಿ